ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ರೂ. ೪,೬೫,೪೯,೧೦೦–೦೦

ಆ) ೪,೩೪,೭೬೦ (೧೯೭೮–೭೯ ರಿಂದ ೮೭–೮೮ರವರೆಗೆ)

ಇ) ಇಲ್ಲಾ

ಅರಸೀಕೆರೆ ತಾಲ್ಲೂಕು, ಗಂಡಸಿ ಜೂನಿಯರ್ ಕಾಲೇಜಿನ ಇಂಗ್ಲೀಷ್ ಉಪಾಧ್ಯಾಯರ ನೇಮಕಾತಿ ಬಗ್ಗೆ

೭೫೩. (೧೬೦೧) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಗಂಡಸಿ ಜೂನಿಯರ್ ಕಾಲೇಜ್ ೧೯೮೩–೮೪ರಲ್ಲಿ ಪ್ರಾರಂಭವಾಗಿದೆ. ಅಂದಿನಿಂದ ಈ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇಂಗ್ಲೀಷ್ ಉಪನ್ಯಾಸಕರನ್ನು ನೇಮಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು). —

ಅ) ಹೌದು.

ಆ) ಈಗ ನೇಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕೆಯ ವಿಸ್ತೀರ್ಣದ ಬಗ್ಗೆ

೭೫೪ (೧೬೧೪) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕಾ ಇಲಾಖೆಯವರ ಸ್ವಾಧೀನದಲ್ಲಿರುವ ಒಟ್ಟು ಭೂಮಿ ಎಷ್ಟು ?

ಆ) ಆ ಭೂಮಿಯಲ್ಲಿ ಏನೇನು ಬೆಳೆಸುತ್ತಾರೆ ? ಇಲ್ಲಿ ತರಕಾರಿ ಬೀಜಗಳನ್ನು ಜನರಿಗೆ ಒದಗಿಸುವ ವ್ಯವಸ್ಥೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು). —

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕೆ ಕ್ಷೇತ್ರದ ಒಟ್ಟು ವಿಸ್ತೀರ್ಣ ೨೬.೭೨ ಎಕರೆಗಳು.

ಆ) ಈ ಸಸ್ಯ ಕ್ಷೇತ್ರದಲ್ಲಿ ಈ ಕೆಳಕಂಡ ತರಕಾರಿ ಭೀಜಗಳನ್ನು ಉತ್ಪಾದಿಸಿ ಜನರಿಗೆ ಒದಗಿಸಲಾಗುತ್ತಿದೆ.

೧. ಅಲಸಂದೆ ೨. ಬೆಂಡೆ ೩. ಬದನೆ ೪. ಹಾಗಲಕಾಯಿ
೫. ಹೀರೇಕಾಯಿ ೬. ಸೋರೇಕಾಯಿ

ಹಳೆ ಹೈದರಾಬಾದ್ ಭಾಗದಲ್ಲಿ ಪ್ರಾರಂಭವಾದ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುದಾನ ನೀಡುವ ಬಗ್ಗೆ

೭೫೫ (೧೬೨೨) ಶ್ರೀ ಮಲ್ಲಿಕಾರ್ಜುನ ದಿವಟರ್ (ಕೊಪ್ಪಳ). —ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಖಾಸಗಿ ಪೂರ್ವ ಪ್ರಾಥಮಿಕ ಹಂತಕ್ಕೆ ಹಳೆ ಹೈದರಾಬಾದ್ ಭಾಗದಲ್ಲಿ ಪ್ರಾರಂಭವಾದ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಪ್ರತಿವರ್ಷ ಅನುದಾನ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಾಂಬೆ-ಮದ್ರಾಸ್ ಪ್ರಾಂತ್ಯದಲ್ಲಿ ಮೊದಲಿನಿಂದ ಇಂದಿಗೂ ನೀಡುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಮೇಲಿನ ಹೈದರಾಬಾದ್ ಭಾಗದ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಕೂಡಾ ನೀಡಲಾಗುವುದೆ ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು). —

ಅ) ಬಂದಿದೆ.

ಆ) ನಿಜ.

ಇ) ಇಲ್ಲ. ಕಾರಣ, ೧-೪-೮೪ರಿಂದ ಯಾವದೇ ಹೊಸ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಯನ್ನು ಅನುದಾನಕ್ಕೆ ಒಳಪಡಿಸುತ್ತಿಲ್ಲ.

ಹಾಸನ ಜಿಲ್ಲೆ ದಂದ್ದ ಜೂನಿಯರ್ ಕಾಲೇಜಿನ ಕಟ್ಟಡದ ಕೆಲಸ ಸ್ಥಗಿತಗೊಂಡಿರುವ ಬಗ್ಗೆ

೭೫೬ (೧೫೯೨) ಶ್ರೀ ಬಿ. ಶಿವರಾಮು (ಗಂಡಸಿ). —ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹಾಸನ ತಾಲ್ಲೂಕ್ ದುದ್ದ ಹೋಬಳಿಯ ಜೂನಿಯರ್ ಕಾಲೇಜ್ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಇ) ಇದಕ್ಕೆ ಒಟ್ಟು ನಿಗದಿಪಡಿಸಿರುವ ವೆಚ್ಚ ಎಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು). —

ಅ) ಬಂದಿದೆ.

ಆ) ಕಟ್ಟಡದ ನಿರ್ಮಾಣಕ್ಕೆ ೧೯೮೮-೮೯ರಿಂದ ೧೯೮೯-೯೦ ರವರೆಗೆ ಒಟ್ಟು ೨.೭೪ ಲಕ್ಷ ರೂ. ಗಳನ್ನು ಖರ್ಚು ಮಾಡಿದೆ. ಉಳಿದ ಹಣವಾದ ೨.೧೩ ಲಕ್ಷ ರೂ.ಗಳಿಗೆ ಎಲ್.ಒ.ಸಿ. (ಖಾತರಿ ಪತ್ರ) ನೀಡದೆ ಇದ್ದಕಾರಣ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಇ) ರೂ. ೪.೮೭ ಲಕ್ಷ ರೂ.ಗಳು.